ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ
*ಹುಡುಗಿಯರು ಹಿಂತಿರುಗಿ ನೋಡುವುದು ಯಾವಾಗ?*



ಹಿಂದಿನಿಂದ ಹಾದುಹೋದ ವಾಹನ ಕೊಚ್ಚೆ ಹಾರಿಸಿದಾಗ!

ವಿ.ಶ್ರೀವತ್ಸ, ಬೆಂಗಳೂರು
*ಮಡೆಸ್ನಾನದ ದಿನ ಬ್ರಾಹ್ಮಣರು ಉಪವಾಸ ಮಾಡಿದರೆ ಅಂಟಿರುವ ಕೆಟ್ಟ ಹೆಸರು, ಅನಿಷ್ಟ ಪದ್ಧತಿ ಕೊನೆಗಾಣುವುದೆ?*
ಉಪವಾಸವೇಕೆ? ಸಕಲವನ್ನೂ ಭಕ್ಷಿಸಿ ತಮ್ಮ ಎಲೆ ತಾವೇ ತಕ್ಷಣ ಎತ್ತಿಬಿಟ್ಟರೆ ನೋ ಎಂಜಲೆಲೆ, ನೋ ಮಡೆಸ್ನಾನ. ಪ್ರಾಬ್ಲಂ ಸಾಲ್ವ್!

ಯಮುನಾ ಪದ್ಮನಾಭ್, ಬೆಂಗಳೂರು
*ಇಚ್ಛಾಮರಣ, ಆತ್ಮಹತ್ಯೆಗಳಲ್ಲಿನ ವ್ಯತ್ಯಾಸವೇನು?*
ಕುಡಿತ, ಸಿಗರೇಟ್ ಸೇವನೆಯಿಂದ ಸಾಯುವುದು ಇಚ್ಛಾಮರಣ; ರ್‍ಯಾಶ್ ಡ್ರೈವಿಂಗ್‌ನಿಂದ ಸಾಯುವುದು ಆತ್ಮಹತ್ಯೆ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಎಲ್ಲರ ಮನೆಯ ದೋಸೆಯೂ ತೂತು ಏಕಾಯಿತು?*



ತೂತಿನಲ್ಲಿ ಚಟ್ನಿ, ಪಲ್ಯ ತುಂಬಿ ಪಟ್ಟಾಗಿ ಹೊಡೆಯಲು!

ಡಿ.ಎಲ್.ನಾಗರಾಜ್, ಚನ್ನಗಿರಿ
*ಆತ್ಮವಿಶ್ವಾಸಕ್ಕೂ, ಅಹಂಕಾರಕ್ಕೂ ಏನು ವ್ಯತ್ಯಾಸ?*
ಆತ್ಮವಿಶ್ವಾಸ ತುಂಬಿ ಹರಿಯುವ ನದಿ; ಅಹಂಕಾರ ಪ್ರವಾಹ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ಎಲ್ಲಾ ಪ್ರಶ್ನೆಗಳಿಗೂ ಧಡಾರನೆ ಉತ್ತರಿಸುವ ನಿಮಗೆ ಉತ್ತರಕುಮಾರ, ಉತ್ತರಪಥೇಶ್ವರ ಎಂದು ಬಿರುದು ನೀಡಿದರೆ ಹೇಗೆ?*
ಉತ್ತರಕ್ರಿಯಾ ಪ್ರವೀಣ ಎಂದಿಲ್ಲವಲ್ಲಾ, ಥ್ಯಾಂಕ್ಸ್!

ರಾಜೇಂದ್ರ ಹೆಗಡೆ, ಹಾವೇರಿ
*1990ರಲ್ಲಿ ವೃಷ್ಟಿಕರವರು ಈ ಅಂಕಣದಲ್ಲಿ ನನ್ನ ಪ್ರಶ್ನೆಗೆ ಉತ್ತಮ ಎಂದು ಬಹುಮಾನ ಕೊಟ್ಟಿದ್ದರು. ನೀವು?*
ಸರಿಯೇ. ಆದರೆ 22 ವರ್ಷಗಳಾದರೂ ನಿಮಗೆ ಒಂದಾದರೂ ಒಳ್ಳೆಯ ಪ್ರಶ್ನೆ ಏಕೆ ಹೊಳೆದಿಲ್ಲ?

ಆರ್.ಮಧುಸೂದನ್, ಹಾಸನ
*ಪ್ರೇಮದ ನೈಜ ಸುಖ ಇರುವುದು ಬಿಸಿ ಅಪ್ಪುಗೆಯಲ್ಲೋ, ಸಿಹಿ ಚುಂಬನದಲ್ಲೋ?*
ಎರಡೂ ಅಲ್ಲ. ಪಬ್ಲಿಕ್‌ನಲ್ಲಿ ವೀಡಿಯೊ ನೋಡಿದರೂ ಕ್ಷಮಿಸುವ ಪತ್ನಿಯ ಗುಣದಲ್ಲಿ!

ಹಾಡ್ಯ ಬಿ. ಜಯಾನಂದ, ಮೈಸೂರು
*ಸೋತು ಗೆಲ್ಲು ಅಂತಾರಲ್ಲ, ಅದು ಹೇಗೆ?*
ಬೆಟ್ಟಿಂಗ್ ಕಟ್ಟಿ! ನಮ್ಮ ಕ್ರಿಕೆಟಿಗರಿಗೆ ಇದು ಬಹಳ ಚೆನ್ನಾಗಿ ಗೊತ್ತು!

ಬಿ.ಎಸ್.ಸೊಲ್ಲಾಪುರ, ಬೀದರ್
*ಭಾರತದಲ್ಲಿ ಒಂದೇ ಪಕ್ಷ, ಒಂದೇ ಜಾತಿ ಇದ್ದು ಸಾ.ಪ್ರ.ಪ. (ಸಿಇಟಿ) ಪರೀಕ್ಷೆಯ ಮೂಲಕ ಟಿಕೆಟ್ ಕೊಡುವ ಪ್ರಜಾತಂತ್ರ ಯಾವಾಗ ಬರುತ್ತದೆ?*
ಜಾತಿ, ಪಕ್ಷ ಬಿಡಿ; ಈಗ ಇರುವುದೂ ಸಾ.ಪ್ರ.ಪ ಮಾದರಿಯೇ – ಸಾರಾಯಿ, ಪ್ರಲೋಭನೆ, ಪಕ್ಷಪಾತ!

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ನಾಯಿ ಯಾಕೆ ಹಣ್ಣುಗಳನ್ನು ತಿನ್ನುವುದಿಲ್ಲ?*
ಮೊದಲೇ ನಾಯಿಪಾಡು, ಹಣ್ಣು ತಿಂದು ಹೆಚ್ಚು ಜೀವಿಸಿ ಹೆಚ್ಚಿನ ಪಾಡು ಪಡುವುದು ಬೇಡವೆಂದು!

ವಿ. ಹಮೀದ್, ವಿಟ್ಲ
*ಹೆಂಡತಿಯಾದವಳು ಅಗತ್ಯವಾಗಿ ಗಂಡನಿಗೆ ಏನು ಸಹಾಯ ಮಾಡಬೇಕು ಸರ್?*
ದುಡಿದು ತಾ; ಹೊಡೆದು ತರಬೇಡ ಎನ್ನಬೇಕು. ಗಂಡ ಉತ್ತಮನಾಗುತ್ತಾನೆ, ದೇಶ ನಿರ್ಲಂಚವಾಗುತ್ತದೆ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ರೌಡಿಸಂ ರಾಜಕೀಯದ ಮೊದಲ ಹೆಜ್ಜೆ ಎನ್ನಬಹುದೆ?*
ವಕೀಲರ ದಾಪುಗಾಲು ಎಂದೂ ಹೇಳಬಹುದು. ಇತ್ತೀಚಿನ ವಕೀಲರಿಗೆ ಹೋಲಿಸಿದರೆ ಮಂತ್ರಿ ಹಲ್ಲು ಕಿತ್ತ ಹಾವು!

## ಬಹುಮಾನಿತ ಪ್ರಶ್ನೆ

ವೆಂಕಟೇಶ ಎಂ. ಪೈ, ಕಾಸರಕೋಡ
*ಹಣವು ಮಾತನಾಡಲು ಪ್ರಾರಂಭಿಸಿದಾಗ ಸತ್ಯವು ಸುಮ್ಮನಾಗುವುದೇಕೆ?*
ಒಬ್ಬರು ಮಾತನಾಡುತ್ತಿರುವಾಗ ಮಧ್ಯದಲ್ಲಿ ಮಾತನಾಡದೆ ಇರುವುದು ಮರ್ಯಾದಸ್ಥರ ಲಕ್ಷಣ!

ಮಹಾವೀರ ಕಾಸರ, ಶಿವಮೊಗ್ಗ
*ರಾತ್ರಿ ಗಸ್ತಿನಲ್ಲಿರುವ ಪೇದೆಗಳು ಸಿಳ್ಳೆ ಹೊಡೆಯುವುದೇಕೆ?*
ಮಲಗಿರುವ ನಾಯಿಗಳು ಎದ್ದು ಮನೆ ಕಾಯಲೆಂದು!

ಎ.ಎಸ್. ಸ್ವಾಮಿ, ಶೋರಾಪುರ
*ನಿಮ್ಮ ಕೊನೆಯ ಆಸೆ ಏನು?*
ಸುಮ್ಮನಿರಿ ಸಾರ್! ಈ ಪ್ರಶ್ನೆ ಕೇಳಲು ನೀವೇನು ವೀರಪ್ಪನ್ನೂ ಅಲ್ಲ, ನಾನು ಆನೆಯೂ ಅಲ್ಲ!

ವಿರಾಜ್, ಅಡೂರು
*ಪ್ರೇಮ ಅಮರ; ಪ್ರೀತಿ...?*



ಆ ಮರ, ಈ ಮರಗಳ ಕೆಳಗಿನ ಭ್ರಮರ!

ಡಿ.ಎಲ್. ಚಂದ್ರಿಕಾ, ಚನ್ನಗಿರಿ
*ಇಂದಿನ ಸಿನಿಮಾಗಳಲ್ಲಿ ಮಾತಿನಲ್ಲಿ ವ್ಯಕ್ತವಾಗುವ ಭಾವನೆಗಳು ಮುಖದಲ್ಲಿ ಗೋಚರಿಸುವುದಿಲ್ಲ; ಏಕೆ?*
ಡೈಲಾಗ್‌ಗಳು ಹೇಳಿಕೊಟ್ಟಂತಹವು, ಭಾವ ಸ್ವಂತದ್ದು; ಅನುಭವಿಸದೆ ಅಭಿನಯಿಸಿದರೆ ಭಾವ ಅಭಾವ!

ಪಿ.ಜಿ. ರಾಘವೇಂದ್ರ, ಮೈಸೂರು
*ಆಣೆ- ಪ್ರಮಾಣ ಮಾಡುವ ಬದಲು ಇಬ್ಬರಿಗೂ ನೈಂಟಿ ಕುಡಿಸಿದರೆ ಹೇಗೆ?*
ಅಂತಹ ಪೀಪಾಯಿಗಳಿಗೆ ನೈಂಟಿ ನೀಡುವುದು ಸಾಗರಕ್ಕುದ್ಧರಣೆ ಜಲವು ಅಲ್ಪಜ್ಞ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಕಳ್ಳನೋಟು ಬಾರದಂತೆ ಸರ್ಕಾರ ಚಿಲ್ಲರೆ ನಾಣ್ಯ ಹೆಚ್ಚಿಗೆ ಬಿಡುಗಡೆ ಮಾಡಿದರೆ?*
ವಿರೋಧಪಕ್ಷದವರು ಇದು ಚಿಲ್ರೆ ಸರ್ಕಾರ ಎಂದು ಖಂಡಿಸುವರಂತೆ!

■ ರಾಮ್